**SC No. 21/2019**
**PW-23**

# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು.

## ಎಸ್. ಸಿ. 21/2019

| | | |
|---|---|---|
| ಸಾಕ್ಷಿದಾರರ ಹೆಸರು | ಶಂಕರ್ ಎಂ.ಜೆ. | ಪ್ರಮಾಣ ವಚನ ಮಾಡಿದ ದಿನಾಂಕ: 14.01.2026 |
| ತಂದೆಯ/ಗಂಡನ ಹೆಸರು | ಲೇಟ್ ಜವರಯ್ಯ | |
| ವಯಸ್ಸು | 48 ವರ್ಷ | |
| ವೃತ್ತಿ | ಮುಖ್ಯ ಪೇದೆ, ವಿಜಯನಗರ ಪೊಲೀಸ್ ಠಾಣೆ | ಪ್ರಾ.ಸಾಃ 23 |
| ವಾಸ ಸ್ಥಳ | ಮೈಸೂರು | ಚಾ.ಸಾಃ 33 |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕ ರಿಂದ:**

ನಾನು ಮಂಡಿ ಪೊಲೀಸ್ ಠಾಣೆಯಲ್ಲಿ *2012* ರಿಂದ *2017* ರವರೆಗೆ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೆನು.

ದಿನಾಂಕ *25.06.2015* ರಂದು ಪಿ.ಐ ರವರು ನನ್ನನ್ನು ಮತ್ತು ಸಿಬ್ಬಂದಿಯವರಾದ ಷಡಕ್ಷರಿ, ನಾಗೇಂದ್ರ, ಮಂಜುಳಾ ಮತ್ತು ರೂಪ ರವರನ್ನು ಇಲಾಖಾ ಜೀಪ್ ನಲ್ಲಿ ಠಾಣೆಯ ಮೊ.ಸಂಖ್ಯೆ *95/2015* ಪ್ರಕರಣದಲ್ಲಿನ ಆರೋಪಿ ಮನೆಯ ಬಳಿ ಇರುವುದಾಗಿ ಬಾತ್ಮಿದಾರರಿಂದ ಮಾಹಿತಿ ಬಂದ ಮೇರೆಗೆ ನಮ್ಮನ್ನು ತಿಲಕ್ ನಗರದ, ವೆಸ್ಲಿ ರಸ್ತೆ ಯ ಆರೋಪಿತರಾದ ವೇದಾವತಿ ರವರ ಮನೆಗೆ ಕರೆದುಕೊಂಡು ಹೋಗಿದ್ದರು. ನಾವು ಮನೆಯ ಹತ್ತಿರ ಹೋಗುವಾಗ ಆರೋಪಿತರು ನಮ್ಮ ಪೊಲೀಸ್ ವಾಹನವನ್ನು ನೋಡಿ ಮುಂದಕ್ಕೆ ಹೋಗಲು ಪ್ರಯತ್ನಿಸಿದ್ದರು

ಅಷ್ಟರಲ್ಲಿ ಇನ್ಸ್ ಪೆಕ್ಟರ್ ರವರು ಮಹಿಳಾ ಸಿಬ್ಬಂದಿಯವರಿಗೆ ಆರೋಪಿಯನ್ನು ಹಿಡಿದುಕೊಳ್ಳುವಂತೆ ಸೂಚಿಸಿದ್ದರು ಮಹಿಳಾ ಸಿಬ್ಬಂದಿಯವರು ಆರೋಪಿತರನ್ನು ಹಿಡಿದುಕೊಂಡಿದ್ದು ಇನ್ಸ್ ಪೆಕ್ಟರ್ ರವರು ಸ್ಥಳ ದಲ್ಲಿಯೇ ಅವರನ್ನು ದಸ್ತಗಿರಿ ಮಾಡಿ ಸರ್ವೋಚ್ಚ ನ್ಯಾಯಾಲಯದ *11* ಅಂಶಗಳ ಪ್ರಕಾರ ಕ್ರಮವನ್ನು ಅನುಸರಿಸಿ ಆರೋಪಿತರ ಅಕ್ಕನ ಮಗನಾದ ಅಮಿತ್ ಕುಮಾರ್ ರವರಿಗೆ ವಿಚಾ ತಿಳಿಸಿ ಅವರಿಗೆ ನೋಟೀಸ್ ಅನ್ನು ಜಾರಿ ಮಾಡಿದ್ದರು. ಆ ನಂತರ ಆರೋಪಿತರನ್ನು ವಿಚಾರಣೆ ಮಾಡಲಾಗಿ ಅವರು  ಪವಿತ್ರ ಎಂಬುವರಿಗೆ ಈ  ಹಿಂದೆ ಬಡ್ಡಿಗೋಸ್ಕರ ಹಣವನ್ನು ಕೊಟ್ಟಿದ್ದು ಅವರಿಗೆ ಹೆಚ್ಚಿನ ಬಡ್ಡಿ ಕೊಡುವಂತೆ ನಾನು ಒತ್ತಾಯಿಸಿದ್ದು ಅದಕ್ಕೆ ಅವರು ದಿನಾಂಕ *11.06.2015* ರಂದು ಕೀಟನಾಶಕವನ್ನು ಸೇವಿಸಿ ಮೃತರಾಗಿರುತ್ತಾರೆ ಎಂದು ವಿಚಾರಣೆ ಕಾಲದಲ್ಲಿ ತಿಳಿಸಿದ್ದರು ಮತ್ತು ಇನ್ನು ಹೆಚ್ಚಿನ ಜನರಿಗೆ ನಾನು ಬಡ್ಡಿಗೆ ಹಣವನ್ನು ಕೊಟ್ಟಿದ್ದು ಅವರಿಂದ ದಾಖಲಾತಿಗಳನ್ನು ಪಡೆದುಕೊಂಡು ಮನೆಯಲ್ಲಿ ಇಟ್ಟಿರುವುದಾಗಿ ತಿಳಿಸಿದ್ದರು. ಆ ನಂತರ ಇನ್ಸ್ ಪೆಕ್ಟರ್ ರವರು ದಾರಿಯಲ್ಲಿ ಬರುತ್ತಿದ್ದ ಜಯಂತ್ ಮತ್ತು ಸಂಜಯ್ ಎಂಬುವ ಇಬ್ಬರನ್ನು ಪಂಚರಾಗಿ ಇರಲು ಮತ್ತು ಕೇಸಿನ ವಿಚಾರವನ್ನು ತಿಳಿಸಿ ಅವರಿಗೆ ಪಂಚರಾಗಲು ಕೇಳಿಕೊಂಡಾಗ ಅವರು ಒಪ್ಪಿಕೊಂಡಿದ್ದರಿಂದ ನೋಟೀಸ್ ಅನ್ನು ಜಾರಿ ಮಾಡಿತ್ತು ಆನಂತರ ಮನೆಯಲ್ಲಿ ಹೋಗಿ ಆರೋಪಿ ಕಬ್ಬಿಣದ ಅಲ್ಮೇರಾ  ಬೀರುವಿನಿಂದ ಕೀ ತೆಗೆದು ದಾಖಲಾತಿಗಳನ್ನು ಕೊಟ್ಟಿದ್ದು ಆ ದಾಖಲೆಗಳನ್ನು ಇನ್ಸ್ ಪೆಕ್ಟರ್ ರವರು ಪಂಚರ ಸಮಕ್ಷಮ ಕೇಸಿಗೆ ಸಂಬಂಧಿಸಿದ ದಾಖಲಾತಿಗಳನ್ನು ವಶಪಡಿಸಿಕೊಂಡಿದ್ದರು. ಈ ಸಮಯದಲ್ಲಿ ನಾನು ಕ್ಯಾಮೆರಾದಿಂದ ಫೋಟೋ ಮತ್ತು ವಿಡಿಯೋಗಳನ್ನು ತೆಗೆದಿದ್ದೆ. ಆ ವಿಡಿಯೋಗಳನ್ನು ನಮ್ಮ ಠಾಣೆಯ ಪಕ್ಕದಲ್ಲಿ ಇದ್ದಂತಹ ಕೃಷ್ಣ

ಎಂಬುವರ ಸೈಬರ್ ಸೆಂಟರ್ ನಲ್ಲಿ ಫೋಟೋ ಪ್ರಿಂಟ್ ತೆಗೆಸಿ ವಿಡಿಯೋ ವನ್ನು ಸಿಡಿಗೆ ಕಾಪಿ ಮಾಡಿ ತಂದು ಇನ್ಸ್ ಪೆಕ್ಟರ್ ರವರ ಮುಂದೆ ಹಾಜರುಪಡಿಸಿದ್ದೆ ಈ ಬಗ್ಗೆ ಪ್ರಮಾಣ ಪತ್ರ ಕೊಟ್ಟಿದ್ದೆ ಸಾಕ್ಷಿದಾರರು ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-*73* ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-*73(ಎ)* ಎಂದು ಗುರುತಿಸಲಾಯಿತು. ಸಾಕ್ಷಿದಾರರು ಫೋಟೋಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-*35* ರಿಂದ *38* ಎಂದು ಗುರುತಿಸಲ್ಪಟ್ಟಿರುತ್ತವೆ.

***( ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಮುಂದುವರೆದ ಮುಖ್ಯ ವಿಚಾರಣೆ ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶವನ್ನು ನೀಡಿ ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.)***

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

**4 ನೇ ಅಪರ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಮೈಸೂರು.**